रेलवे भर्ती बोर्ड / RAILWAY RECRUITMENT BOARDS
सीईएन - 04/2026 - जेई, डीएमएस, सीएमए - CEN - 04/2026 - JE, DMS, CMA

Test Date	28/10/2026
Test Time	9:00 AM - 10:30 AM
Subject / Exam Group	RRB JE DMS CMA CBT I

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB JE DMS CMA CBT I**

Q.1 **ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆಮಾಡಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.**

DTP : ARS
GPN : DNQ

Ans
- ✗ 1. FJU : CHW
- ✗ 2. NIR : KGT
- ✗ 3. NQQ : KNR
- ✓ 4. EYQ : BWT

Q.2 **ಇದರ ಮೌಲ್ಯವನ್ನು ಕಂಡುಹಿಡಿಯಿರಿ:**
$(\sin\theta + \operatorname{cosec}\theta)^2 + (\cos\theta + \sec\theta)^2 - \tan^2\theta - \cot^2\theta.$

Ans
- ✗ 1. 0
- ✗ 2. 10
- ✗ 3. 6
- ✓ 4. 7

Q.3 **ಒಂದು ಚೆಂಡನ್ನು ದಾರಕ್ಕೆ ಕಟ್ಟಿ ಸ್ಥಿರ ಜವದಲ್ಲಿ ಸಮತಲ ವೃತ್ತದಲ್ಲಿ ತಿರುಗಿಸಲಾಗುತ್ತದೆ. ಒಂದು ವೇಳೆ ದಾರವು ಇದ್ದಕ್ಕಿದ್ದಂತೆ ಮುರಿದರೆ ಏನಾಗುತ್ತದೆ?**

Ans
- ✗ 1. ಚೆಂಡು ವೃತ್ತದ ಕೇಂದ್ರಭಾಗದಿಂದ ಹೊರಕ್ಕೆ ಚಲಿಸುತ್ತದೆ
- ✓ 2. ಚೆಂಡು ಮುರಿಯುವ ಬಿಂದುವಿನಲ್ಲಿ ವೃತ್ತಕ್ಕೆ ಸ್ಪರ್ಶಕೀಯವಾಗಿ ಸರಳ ರೇಖೆಯಲ್ಲಿ ಚಲಿಸುತ್ತದೆ
- ✗ 3. ಚೆಂಡು ಸ್ವಲ್ಪ ಸಮಯದವರೆಗೆ ವೃತ್ತಾಕಾರದ ಪಥದಲ್ಲಿ ಚಲಿಸುತ್ತಲೇ ಇರುತ್ತದೆ
- ✗ 4. ಚೆಂಡು ವೃತ್ತದ ಕೇಂದ್ರದ ಕಡೆಗೆ ಒಳಮುಖವಾಗಿ ಸುರುಳಿಯಾಗಿ ಚಲಿಸುತ್ತದೆ

Q.4 **ಒಂದುವೇಳೆ 9 ಸಂಖ್ಯೆಗಳ ಒಟ್ಟು ಮೊತ್ತವು 81 ಆದರೆ, ಅವುಗಳ ಸರಾಸರಿ ಎಷ್ಟು?**

Ans
- ✗ 1. 10
- ✓ 2. 9
- ✗ 3. 8
- ✗ 4. 19

Q.5 ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆಮಾಡಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

IQI : GSK
OMP : MOR

Ans

✗ 1. LKC : JMD

✓ 2. DVR : BXT

✗ 3. SMJ : QOK

✗ 4. GWS : EXU

Q.6 ಒಂದು ವಸ್ತುವನ್ನು ಏಕರೂಪ ಚಲನೆಯಲ್ಲಿದೆ ಎಂದು ಯಾವಾಗ ಕರೆಯಲಾಗುತ್ತದೆ?

Ans

✗ 1. ಸಮಯದ ಸಮಾನ ಮಧ್ಯಂತರಗಳಲ್ಲಿ ಅಸಮಾನ ಅಂತರಗಳನ್ನು ಕ್ರಮಿಸುತ್ತದೆ

✗ 2. ಜವವನ್ನು ಪದೇ ಪದೇ ಹೆಚ್ಚಿಸುತ್ತದೆ ಮತ್ತು ನಿಧಾನಗೊಳಿಸುತ್ತದೆ

✗ 3. ನಿರಂತರವಾಗಿ ತನ್ನ ದಿಕ್ಕನ್ನು ಬದಲಾಯಿಸುತ್ತದೆ

✓ 4. ಸಮಾನ ಅಂತರಗಳನ್ನು ಸಮಾನ ಸಮಯದ ಮಧ್ಯಂತರಗಳಲ್ಲಿ ಆವರಿಸುತ್ತದೆ

Q.7 ಆಂಗ್ಲ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು, ಒಂದೇ ಗುಂಪಿಗೆ ಸೇರುತ್ತವೆ. ಯಾವ ಅಕ್ಷರ-ಗುಚ್ಛ ಜೋಡಿಯು ಆ ಗುಂಪಿಗೆ ಸೇರುವುದಿಲ್ಲ?

(ಸೂಚನೆ: ಗುಂಪಿಗೆ ಸೇರದ ಅಕ್ಷರ-ಗುಚ್ಛವು, ಅದರಲ್ಲಿರುವ ವ್ಯಂಜನಗಳು/ಸ್ವರಾಕ್ಷರಗಳು ಅಥವಾ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದೆ ಇರುವುದಲ್ಲ.)

Ans

✗ 1. FI-MD

✗ 2. HK-OF

✗ 3. JM-QH

✓ 4. LO-SI

Q.8 ಒಂದು ಸಂಖ್ಯೆಯ 40% ಅನ್ನು 120 ಕ್ಕೆ ಕೂಡಿಸಿದರೆ, ಬರುವ ಫಲಿತಾಂಶವು ಅದೇ ಸಂಖ್ಯೆಯಾಗಿರುತ್ತದೆ. ಹಾಗಾದರೆ ಅದೇ ಸಂಖ್ಯೆಯ 70% ಅನ್ನು ಕಂಡುಹಿಡಿಯಿರಿ.

Ans

✓ 1. 140

✗ 2. 120

✗ 3. 180

✗ 4. 160

Q.9 ಬಾಯಿಯಲ್ಲಿ ಜೀರ್ಣಕ್ರಿಯೆಗೆ ಸ್ನಾಯುವಿನ (muscular) ನಾಲಿಗೆಯು ಹೇಗೆ ನೆರವಾಗುತ್ತದೆ?

Ans

✗ 1. ಜೀರ್ಣಕಾರಿ ಕಿಣ್ವಗಳನ್ನು ಬಾಯಿಯೊಳಗೆ ಸ್ರವಿಸುವ ಮೂಲಕ

✓ 2. ಆಹಾರವನ್ನು ಲಾಲಾರಸದೊಂದಿಗೆ ಬೆರೆಸಿ ಅಗಿಯಲು ಸಹಾಯ ಮಾಡುವ ಮೂಲಕ

✗ 3. ಆಹಾರವನ್ನು ನೇರವಾಗಿ ಜಠರಕ್ಕೆ ಸಾಗಿಸುವ ಮೂಲಕ

✗ 4. ಬಾಯಿಯ ಒಳಪದರವನ್ನು ರಕ್ಷಿಸಲು ಲೋಳೆಯನ್ನು ಉತ್ಪತ್ತಿ ಮಾಡುವ ಮೂಲಕ

Q.10 ಒಬ್ಬ ಜೀವಶಾಸ್ತ್ರಜ್ಞನು +5 D ಸಾಮರ್ಥ್ಯದೊಂದಿಗೆ ಕೇಂದ್ರೀಕರಣ ಮಸೂರವನ್ನು ಬಳಸಿಕೊಂಡು ಒಂದು ಮಾದರಿಯ ಮೇಲೆ ಸೂರ್ಯನ ಬೆಳಕನ್ನು ಕೇಂದ್ರೀಕರಿಸುತ್ತಾನೆ. ಒಂದು ವೇಳೆ ತಾಪನದಿಂದಾಗಿ ಮಸೂರದ ಸಂಗಮದೂರವು ಬದಲಾದರೆ ಮತ್ತು ಅದು 15 cm ಆದರೆ, ಮಸೂರದ ಹೊಸ ಸಾಮರ್ಥ್ಯ ಎಷ್ಟು?

Ans

✓ 1. +6.67 D

✗ 2. +0.15 D

✗ 3. +5 D

✗ 4. +1.5 D

Q.11 ಭಾರತದ ಅತ್ಯಂತ ಹಳೆಯ ಕಚ್ಚಾ-ಪೆಟ್ರೋಲಿಯಂ ಉತ್ಪಾದಿಸುವ ಪ್ರದೇಶವೆಂದು ಯಾವ ಪ್ರದೇಶವನ್ನು ಗುರುತಿಸಲಾಗುತ್ತದೆ ಮತ್ತು ದಿಗ್ಬಾಯ್ ಅದರ ಅತ್ಯಂತ ಆರಂಭಿಕ ಕ್ಷೇತ್ರವಾಗಿದೆ?

Ans

✓ 1. ಅಸ್ಸಾಂ

✗ 2. ರಾಜಸ್ಥಾನ

✗ 3. ತಮಿಳುನಾಡು

✗ 4. ಗುಜರಾತ್

blackbook

Q.12 ಒಂದು ಆಯತದ ಉದ್ದ ಮತ್ತು ಅಗಲದ ನಡುವಿನ ಅನುಪಾತವು 3 : 2 ಆಗಿದೆ. ಒಂದುವೇಳೆ ಉದ್ದವು 18 cm ಆಗಿದ್ದರೆ, ಆಯತದ ವಿಸ್ತೀರ್ಣವನ್ನು (cm^2 ಗಳಲ್ಲಿ) ಕಂಡುಹಿಡಿಯಿರಿ.

Ans
- ✗ 1. 210
- ✗ 2. 144
- ✗ 3. 108
- ✓ 4. 216

Q.13 ನರ ಅಂಗಾಂಶಕ್ಕೆ ಸಂಬಂಧಿಸಿದಂತೆ, ನರಕೋಶಗಳ ಪ್ರಮುಖ ಕಾರ್ಯವೇನು?

Ans
- ✗ 1. ನರಕೋಶಗಳು ಚಲನೆಗೆ ಬಲವನ್ನು ಉತ್ಪಾದಿಸುತ್ತವೆ
- ✓ 2. ನರಕೋಶಗಳು ಸಂದೇಶಗಳನ್ನು ಸ್ವೀಕರಿಸುತ್ತವೆ ಮತ್ತು ರವಾನಿಸುತ್ತವೆ
- ✗ 3. ನರಕೋಶಗಳು ಮೆದುಳಿಗೆ ಶಕ್ತಿಯನ್ನು ಸಂಗ್ರಹಿಸುತ್ತವೆ
- ✗ 4. ನರಕೋಶಗಳು ದೇಹಕ್ಕೆ ಹಾರ್ಮೋನುಗಳನ್ನು ಉತ್ಪಾದಿಸುತ್ತವೆ

Q.14 ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.
ಸೂಚನೆ: ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ / ಚಿಹ್ನೆ	6	8	1	9	7	3	#	@	5	%
ಸಂಕೇತ	L	R	G	M	W	X	K	Q	E	N

ಷರತ್ತುಗಳು –
(i) ಮೊದಲ ಅಂಶವು ಬೆಸ ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಅಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಿ.
(ii) ಎರಡನೇ ಮತ್ತು ಮೂರನೇ ಅಂಶಗಳು ಸಂಖ್ಯೆಗಳಾಗಿದ್ದರೆ, ಮೂರನೇ ಅಂಶವನ್ನು ಎರಡನೇ ಅಂಶದ ಸಂಕೇತವಾಗಿ ಸಂಕೇತಿಸಿ.
(iii) ನಾಲ್ಕನೇ ಅಂಶವು ಸಮ ಸಂಖ್ಯೆಯಾಗಿದ್ದರೆ, ನಾಲ್ಕನೇ ಮತ್ತು ಐದನೇ ಅಂಶಗಳನ್ನು © ಎಂದು ಸಂಕೇತಿಸಿ.

ಹಾಗಾದರೆ, ಈ ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
68197

Ans
- ✗ 1. LRGMW
- ✓ 2. LRRMW
- ✗ 3. LRGKW
- ✗ 4. LXGMW

Q.15 ಒಂದು ವೇಳೆ '+' ಮತ್ತು '−' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಮತ್ತು '×' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಬರುತ್ತದೆ?

25 ÷ 3 + 36 x 4 - 7 = ?

Ans
- ✗ 1. 71
- ✗ 2. 72
- ✓ 3. 73
- ✗ 4. 74

Q.16 What is the atomic mass of a carbon atom as commonly used in science?

Ans
- ✓ 1. 12 u
- ✗ 2. 14 u
- ✗ 3. 1 u
- ✗ 4. 16 u

Q.17 **If the direction of current in a vertical wire is upward, the direction of magnetic field lines around it (viewed from above) will be _____.**

Ans

✔ 1. Anti-clockwise

✘ 2. Clockwise

✘ 3. Always downward

✘ 4. Always upward

Q.18 **ಒಂದು ಕೊಳವೆಯು ಒಂದು ತೊಟ್ಟಿಯನ್ನು 24 ನಿಮಿಷಗಳಲ್ಲಿ ತುಂಬಿಸಬಲ್ಲದು. ಇನ್ನೊಂದು ಕೊಳವೆಯು ಸಂಪೂರ್ಣವಾಗಿ ತುಂಬಿದ ತೊಟ್ಟಿಯನ್ನು 56 ನಿಮಿಷಗಳಲ್ಲಿ ಖಾಲಿ ಮಾಡಬಲ್ಲದು. ಒಂದು ವೇಳೆ ಎರಡೂ ಕೊಳವೆಗಳು ಖಾಲಿ ತೊಟ್ಟಿಯ ಮೇಲೆ ಒಟ್ಟಿಗೆ ಕಾರ್ಯ ನಿರ್ವಹಿಸಿದರೆ, ಆ ತೊಟ್ಟಿಯ ಮೂರನೇ ಒಂದು ಭಾಗವನ್ನು ತುಂಬಿಸಲು ಎಷ್ಟು ಸಮಯ (ನಿಮಿಷಗಳಲ್ಲಿ) ಬೇಕಾಗುತ್ತದೆ?**

Ans

✘ 1. 12

✘ 2. 15

✔ 3. 14

✘ 4. 13

Q.19 **ಏಷ್ಯನ್ U20 ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್ 2026ರ ಕ್ರೀಡಾಕೂಟದಲ್ಲಿ, ಪೂಜಾ ಸಿಂಗ್ ಅವರು 1.93 m ಅನ್ನು ದಾಟುವ ಮೂಲಕ 14 ವರ್ಷಗಳಷ್ಟು ಹಳೆಯ ರಾಷ್ಟ್ರೀಯ ದಾಖಲೆಯನ್ನು ಮುರಿದರು. ಅವರು ಯಾವ ಕ್ರೀಡೆಯಲ್ಲಿ ಈ ಸಾಧನೆಯನ್ನು ಮಾಡಿದರು?**

Ans

✘ 1. ಮಹಿಳೆಯರ ಟ್ರಿಪಲ್ ಜಂಪ್

✘ 2. ಮಹಿಳೆಯರ ಪೋಲ್ ವಾಲ್ಟ್

✔ 3. ಮಹಿಳೆಯರ ಎತ್ತರ ಜಿಗಿತ

✘ 4. ಮಹಿಳೆಯರ ಉದ್ದ ಜಿಗಿತ

Q.20 **ಇಂಗಾಲದ ಭಿನ್ನರೂಪಿ (allotrope) ಆಗಿರುವ, ಇದುವರೆಗೆ ತಿಳಿದಿರುವ ಅತ್ಯಂತ ಕಠಿಣವಾದ ನೈಸರ್ಗಿಕ ವಸ್ತು ಯಾವುದು?**

Ans

✘ 1. ಅಸ್ಫಟಿಕ ಇಂಗಾಲ

✔ 2. ವಜ್ರ

✘ 3. ಕಲ್ಲಿದ್ದಲು

✘ 4. ಗ್ರಾಫೈಟ್

Q.21 **Excessive input of nutrients such as nitrates and phosphates into a water body, resulting in algal bloom and depletion of dissolved oxygen, is termed as_____.**

Ans

✘ 1. Biomagnification

✔ 2. Eutrophication

✘ 3. Acidification

✘ 4. Desertification

Q.22 **ದುಗ್ಧರಸವು ಹೆಚ್ಚುವರಿ ಅಂಗಾಂಶ ದ್ರವವನ್ನು ಪರಿಚಲನೆಗೆ ಹೇಗೆ ಹಿಂತಿರುಗಿಸುತ್ತದೆ ಎಂಬುದನ್ನು ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?**

Ans

✘ 1. ದುಗ್ಧರಸವು ದ್ರವವನ್ನು ನೇರವಾಗಿ ಹೃದಯದ ಕೋಣೆಗಳಿಗೆ ಪಂಪ್ ಮಾಡುತ್ತದೆ

✘ 2. ದುಗ್ಧರಸವು ಕೆಂಪು ರಕ್ತ ಕಣಗಳನ್ನು ನೇರವಾಗಿ ಅಂಗಾಂಶದ ಸ್ಥಳಗಳಿಗೆ ಬಿಡುಗಡೆ ಮಾಡುತ್ತದೆ

✔ 3. ದುಗ್ಧರಸುವ ಕೋಶಿಕೆಯ ಹೊರಗಿನ ಸ್ಥಳದ ಹೆಚ್ಚುವರಿ ದ್ರವವನ್ನು ಮತ್ತೆ ರಕ್ತಕ್ಕೆ ಹರಿಸುತ್ತದೆ

✘ 4. ಊತವನ್ನು ತಡೆಗಟ್ಟುವುದಕ್ಕಾಗಿ ದುಗ್ಧರಸವು ಎಲ್ಲಾ ಪ್ಲಾಸ್ಮಾವನ್ನು ಹೀರುತ್ತವೆ

Q.23 **I ಅವರು Z ಅವರ ಸಹೋದರ. C ಅವರು A ಅವರ ಸಹೋದರಿ. Y ಅವರು A ಅವರ ಮಗ. A ಅವರು Z ಅವರ ಹೆಂಡತಿ. ಹಾಗಾದರೆ I ಅವರು Y ಅವರಿಗೆ ಹೇಗೆ ಸಂಬಂಧಿ?**

Ans

✔ 1. ತಂದೆಯ ಸಹೋದರ

✘ 2. ತಂದೆ

✘ 3. ತಂದೆಯ ತಂದೆ

✘ 4. ಮಗ

black

Q.24 ವಿದ್ಯಾರ್ಥಿಯೊಬ್ಬನು ಒಂದು ಪೆನ್ಸಿಲ್‌ನಿಂದ ಮೊದಲು ಮೆಲ್ಲಗೆ ಮತ್ತು ನಂತರ ಹೆಚ್ಚು ಬಲವಾಗಿ , ಹೀಗೆ ಎರಡು ಬಾರಿ ಒಂದೇ ಮೇಜಿನ ಮೇಲೆ ಹೊಡೆಯುತ್ತಾನೆ. ಯಾವ ವೀಕ್ಷಣೆ ಸರಿಯಾಗಿದೆ?

Ans

✗ 1. ಮೆಲ್ಲಗಿನ ಹೊಡೆತವು ದೀರ್ಘ ಕಾಲ ಉಳಿಯುವ ಕಾರಣ ಅದು ಹೆಚ್ಚು ಜೋರಾದ ಶಬ್ದವನ್ನು ಉಂಟುಮಾಡುತ್ತದೆ.

✗ 2. ಶಬ್ದದ ತೀವ್ರತೆಯು ಮೇಜಿನ ದಪ್ಪವನ್ನು ಮಾತ್ರ ಅವಲಂಬಿಸಿರುತ್ತದೆ.

✓ 3. ಹೆಚ್ಚಿನ ಬಲದ ಹೊಡೆತವು ಹೆಚ್ಚಿನ ಪಾರದ ಕಂಪನಗಳನ್ನು ಉಂಟುಮಾಡುವುದರಿಂದ ಅದು ಹೆಚ್ಚು ಜೋರಾದ ಶಬ್ದವನ್ನುಂಟುಮಾಡುತ್ತದೆ.

✗ 4. ಒಂದೇ ಪೆನ್ಸಿಲ್ ಅನ್ನು ಬಳಸಿದ ಕಾರಣ ಎರಡೂ ಒಂದೇ ಧ್ವನಿ ಮಟ್ಟದ (ಜೋರಾದ) ಶಬ್ದವನ್ನು ಉಂಟುಮಾಡುತ್ತವೆ.

Q.25 2026 ರ ಜನವರಿಯಲ್ಲಿ, ಭಾರತದ ಮೊಟ್ಟಮೊದಲ ಮುಕ್ತ ಸಮುದ್ರದ ಕಡಲ ಮೀನುಗಾರಿಕೆ ಕೃಷಿ ಯೋಜನೆಯನ್ನು ಈ ಕೆಳಗಿನ ಯಾವ ಸ್ಥಳದಿಂದ ಉದ್ಘಾಟಿಸಲಾಯಿತು?

Ans

✗ 1. ಬಂಗಾಳ ಕೊಲ್ಲಿ

✗ 2. ಲಕ್ಷದ್ವೀಪ ಸಮುದ್ರ

✓ 3. ಅಂಡಮಾನ್ ಸಮುದ್ರ

✗ 4. ಅರಬ್ಬೀ ಸಮುದ್ರ

Q.26 ಅರೆವಿದಳನ (ಮೈಯೋಸಿಸ್) ದಿಂದ ಉತ್ಪತ್ತಿಯಾಗುವ ಆನುವಂಶಿಕ ವ್ಯತ್ಯಾಸವು ಕೆಲವು ವ್ಯಕ್ತಿಗಳು ಬದುಕುಳಿಯಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಈ ಕೆಳಗಿನ ಯಾವ ಹೇಳಿಕೆ ವಿವರಿಸುತ್ತವೆ?

Ans

✓ 1. ಅರೆವಿದಳನದ (ಮಿಯೋಟಿಕ್) ವ್ಯತ್ಯಾಸಗಳು ಹೊಸ ಪರಿಸ್ಥಿತಿಗಳಿಗೆ ಹೆಚ್ಚು ಸೂಕ್ತವಾದ ಗುಣಲಕ್ಷಣಗಳನ್ನು ಒದಗಿಸುತ್ತವೆ

✗ 2. ಎಲ್ಲಾ ಪ್ರಾಣಿಗಳು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿವೆ, ಆದ್ದರಿಂದ ಅವೆಲ್ಲವೂ ಸಮಾನವಾಗಿ ಬದುಕುಳಿಯುತ್ತವೆ.

✗ 3. ಹೆಚ್ಚು ವರ್ಣತಂತುಗಳನ್ನು ಹೊಂದಿರುವ ಪ್ರಾಣಿಗಳು ಯಾವಾಗಲೂ ಉತ್ತಮವಾಗಿ ಹೊಂದಿಕೊಳ್ಳುತ್ತವೆ.

✗ 4. ಬದುಕುಳಿಯುವಿಕೆಯನ್ನು ಮೂಲ ಆನುವಂಶಿಕ ಸಂಕೇತದಿಂದ ಮಾತ್ರ ನಿರ್ಧರಿಸಲಾಗುತ್ತದೆ, ವ್ಯತ್ಯಾಸಗಳಿಂದಲ್ಲ.

Q.27 ಅಕ್ಷತ್ ಅವರು, ಅರ್ಧ-ವರ್ಷಕ್ಕೊಮ್ಮೆ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ, ₹39,600 ಮೊತ್ತವನ್ನು ವಾರ್ಷಿಕ 10% ಚಕ್ರ ಬಡ್ಡಿಯ ದರದಲ್ಲಿ 1 ವರ್ಷದ ಅವಧಿಗೆ ಹೂಡಿಕೆ ಮಾಡಿದರು. ಹಾಗಾದರೆ ಅವರು ಪಡೆಯುವ ಮೊತ್ತವು:

Ans

✗ 1. ₹43488

✗ 2. ₹43063

✗ 3. ₹44618

✓ 4. ₹43659

Q.28 ಆಮ್ಲಜನಕದ ಕೊರತೆಯಿಂದಾಗಿ ಹಠಾತ್ ದೈಹಿಕ ಚಟುವಟಿಕೆಯ ಸಮಯದಲ್ಲಿ ಸ್ನಾಯು ಸೆಳೆತಕ್ಕೆ ಕಾರಣವಾಗುವ ಪ್ರಕ್ರಿಯೆ ಯಾವುದು?

Ans

✗ 1. ಸ್ನಾಯುಗಳಲ್ಲಿ ದ್ಯುತಿಸಂಶ್ಲೇಷಣೆ

✓ 2. ಸ್ನಾಯುಗಳಲ್ಲಿ ಆಮ್ಲಜನಕರಹಿತ (Anaerobic) ಉಸಿರಾಟ

✗ 3. ಯೀಸ್ಟ್‌ನಲ್ಲಿ ಹುದುಗುವಿಕೆ

✗ 4. ಸ್ನಾಯುಗಳಲ್ಲಿ ಆಮ್ಲಜನಕಾಪೇಕ್ಷಿ (Aerobic) ಉಸಿರಾಟ

Q.29 ಈ ಕೆಳಗಿನ ಅಕ್ಷರ, ಚಿಹ್ನೆಗಳ ಸರಣಿಯನ್ನು ಓದಿರಿ ಮತ್ತು ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) U % & T # £ C £ W N Q @ V T € G # * T $ U # (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆ ಅಕ್ಷರವನ್ನು ಮತ್ತು ತನ್ನ ತಕ್ಷಣದ ಮುಂದೆ ಚಿಹ್ನೆಯನ್ನು ಹೊಂದಿರುವ ಎಷ್ಟು ಅಕ್ಷರಗಳು ಈ ಸರಣಿಯಲ್ಲಿವೆ?

Ans

✓ 1. 2

✗ 2. 5

✗ 3. 4

✗ 4. 3

Q.30 ಪರಮಾಣುಗಳ ಸಂಕೇತಗಳನ್ನು ಬರೆಯುವ ನಿಯಮಗಳ ಆಧಾರದ ಮೇಲೆ, ಈ ಕೆಳಗಿನ ಯಾವ ಜೋಡಿಯಲ್ಲಿ ಧಾತುವು ಅದರ ಪರಮಾಣು ಸಂಕೇತದೊಂದಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ?

Ans
- ✔ 1. ಸೋಡಿಯಂ - Na
- ✘ 2. ಕಬ್ಬಿಣ - Ir
- ✘ 3. ಬೆಳ್ಳಿ - Si
- ✘ 4. ಪೊಟ್ಯಾಸಿಯಮ್ - Po

Q.31 ಒಂದು ತೆರೆದ ಆಯತಾಕಾರದ ಪೆಟ್ಟಿಗೆಯನ್ನು (ಮುಚ್ಚಳವಿಲ್ಲದೆ) 1 cm ದಪ್ಪದ ಮರದಿಂದ ಮಾಡಲಾಗಿದೆ. ಅದರ ಹೊರಗಿನ ಅಳತೆಗಳು 20 cm ಉದ್ದ, 15 cm ಅಗಲ, ಮತ್ತು 10 cm ಎತ್ತರವಾಗಿವೆ. ಪೆಟ್ಟಿಗೆಯನ್ನು ತಯಾರಿಸಲು ಬಳಸಿದ ಮರದ ಘನಫಲವನ್ನು ಕಂಡುಹಿಡಿಯಿರಿ.

Ans
- ✘ 1. 800 cm^3
- ✘ 2. 856 cm^3
- ✘ 3. 900 cm^3
- ✔ 4. 894 cm^3

Q.32 ಎಲ್ಲಾ 103 ಜನರು ಉತ್ತರದ ಕಡೆಗೆ ಮುಖ ಮಾಡಿ ಒಂದು ನೇರ ಸಾಲಿನಲ್ಲಿ ನಿಂತಿದ್ದಾರೆ. ಶ್ರೀ ಸೋನು ಅವರು ಬಲ ತುದಿಯಿಂದ 7ನೇ ಸ್ಥಾನದಲ್ಲಿದ್ದರೆ, ಶ್ರೀ ಪಿಕ್ ಅವರು ಎಡ ತುದಿಯಿಂದ 77ನೇ ಸ್ಥಾನದಲ್ಲಿದ್ದಾರೆ. ಹಾಗಾದರೆ ಶ್ರೀ ಸೋನು ಮತ್ತು ಶ್ರೀ ಪಿಕ್ ಅವರ ನಡುವೆ ಎಷ್ಟು ಜನರಿದ್ದಾರೆ?

Ans
- ✘ 1. 12
- ✔ 2. 19
- ✘ 3. 17
- ✘ 4. 15

Q.33 $ABCD$ ಎನ್ನುವುದು ಒಂದು ಸಮಾಂತರ ಚತುರ್ಭುಜವಾಗಿದ್ದು $\angle A = (3x + 5)^\circ$ ಮತ್ತು $\angle C = (2x + 12)^\circ$ ಆಗಿವೆ. ಹಾಗಾದರೆ $\angle B$ ಯ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✘ 1. 95°
- ✘ 2. 128°
- ✔ 3. 154°
- ✘ 4. 87°

Q.34 1605 ರಲ್ಲಿ ಮಚಲಿಪಟ್ಟಣದಲ್ಲಿ ತನ್ನ ಮೊದಲ ಕಾರ್ಖಾನೆಯನ್ನು ಸ್ಥಾಪಿಸಿದ ಮತ್ತು ನಂತರ ಪುಲಿಕಾಟ್ ಅನ್ನು ಭಾರತದಲ್ಲಿ ತನ್ನ ಪ್ರಧಾನ ಕಚೇರಿಯನ್ನಾಗಿ ಮಾಡಿಕೊಂಡ ಐರೋಪ್ಯ ಶಕ್ತಿ ಯಾವುದು?

Ans
- ✘ 1. ಇಂಗ್ಲಿಷ್
- ✘ 2. ಪೋರ್ಚುಗೀಸ್
- ✔ 3. ಡಚ್
- ✘ 4. ಫ್ರೆಂಚ್

Q.35 n ಎಂಬುದು ಕವಚದ ಸಂಖ್ಯೆಯಾಗಿದ್ದಾಗ, ಕೆಳಗಿನ ಯಾವ ಆಯ್ಕೆಯು ಪರಮಾಣುವಿನ n ನೇ ಶಕ್ತಿ ಮಟ್ಟವನ್ನು ಆಕ್ರಮಿಸಬಹುದಾದ ಗರಿಷ್ಠ ಸಂಖ್ಯೆಯ ಎಲೆಕ್ಟ್ರಾನ್‌ಗಳನ್ನು ನೀಡುತ್ತದೆ?

Ans
- ✘ 1. n
- ✔ 2. $2n^2$
- ✘ 3. 2n
- ✘ 4. n^2

Q.36 ಒಂದು ನಿರ್ದಿಷ್ಟ ಮೊತ್ತವನ್ನು ಸರಳ ಬಡ್ಡಿ ದರದಲ್ಲಿ ಹೂಡಿಕೆ ಮಾಡಿದಾಗ, ಅದು 2 ವರ್ಷಗಳಲ್ಲಿ ₹1,750 ಆಗುತ್ತದೆ ಮತ್ತು 4 ವರ್ಷಗಳಲ್ಲಿ ₹2,000 ಆಗುತ್ತದೆ. ಹಾಗಾದರೆ ವಾರ್ಷಿಕ ಬಡ್ಡಿ ದರವನ್ನು ಕಂಡುಹಿಡಿಯಿರಿ. (ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸರಿಹೊಂದಿಸಿದೆ.)

Ans
- ✔ 1. 8.33 %
- ✘ 2. 10.33 %
- ✘ 3. 9.33 %
- ✘ 4. 7.33 %

Q.37 In 1969, which taxonomist developed the five kingdom model to classify living organisms?

Ans
- ✘ 1. Aristotle
- ✘ 2. Carl Linnaeus
- ✔ 3. Robert H. Whittaker
- ✘ 4. Herbert F. Copeland

Q.38 ಒಂದು ವಸ್ತುವನ್ನು ಅದರ ಅಸಲು ಬೆಲೆಯ ಮೇಲೆ 131% ಲಾಭಕ್ಕೆ ಮಾರಾಟ ಮಾಡಲಾಗುತ್ತದೆ. ಒಂದು ವೇಳೆ ಅಸಲು ಬೆಲೆ ಮತ್ತು ಮಾರಾಟ ಬೆಲೆಯನ್ನು ಅದಲು ಬದಲು ಮಾಡಿದರೆ, ವಹಿವಾಟಿನಲ್ಲಿ ಆಗುವ ಶೇಕಡಾವಾರು ನಷ್ಟ ಎಷ್ಟು? ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಾನಗಳಿಗೆ ಸೀಮಿತಗೊಳಿಸಿ.

Ans
- ✘ 1. 59.28%
- ✘ 2. 57.15%
- ✘ 3. 58.16%
- ✔ 4. 56.71%

Q.39 $[(98 \div 14) \times \{(76 \div 4) + (12 \div 6) \times (7 - 4)\}]$ ಇದರ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✔ 1. 175
- ✘ 2. 707
- ✘ 3. 73
- ✘ 4. 693

Q.40 ಒಂದು ಸಿಲಿಂಡರಾಕಾರದ ಘನವಸ್ತುವಿನ ಒಟ್ಟು ಮೇಲ್ಮೈ ವಿಸ್ತೀರ್ಣವು 792 cm^2 ಆಗಿದೆ. ಅದರ ಪಾದದ ವ್ಯಾಸವು 12 cm ಆಗಿದ್ದರೆ, ಆ ಸಿಲಿಂಡರಾಕಾರದ ಘನವಸ್ತುವಿನ ಎತ್ತರ (cm ಗಳಲ್ಲಿ) ಎಷ್ಟು?
($\pi = \frac{22}{7}$ ಬಳಸಿ)

Ans
- ✘ 1. 14
- ✘ 2. 13
- ✘ 3. 12
- ✔ 4. 15

Q.41 ಒಂದು ಪೋರ್ಟಬಲ್ ಕ್ಯಾಂಪಿಂಗ್ ಲ್ಯಾಂಟರ್ನ್ ಒಂದು ಇನ್ ಬಿಲ್ಟ್ ಬ್ಯಾಟರಿಯೊಂದಿಗೆ ಕಾರ್ಯನಿರ್ವಹಿಸುತ್ತದೆ ಮತ್ತು ಅದು ಸ್ಥಿರ ವೋಲ್ಟೇಜ್ ಅನ್ನು ನೀಡುತ್ತದೆ. ಒಬ್ಬ ಬಳಕೆದಾರನು 'dim' ನಿಂದ 'bright' ಸೆಟ್ಟಿಂಗ್ ಗೆ ಬದಲಾಯಿಸಿದಾಗ, ಲ್ಯಾಂಟರ್ನ್ ನ ಬಲ್ಬ್ ಹೆಚ್ಚು ಶಕ್ತಿಯನ್ನು ಪಡೆಯುತ್ತದೆ. ಬ್ಯಾಟರಿ ವೋಲ್ಟೇಜ್ ಬದಲಾಗುವುದಿಲ್ಲ ಎಂದು ಊಹಿಸಿದರೆ, ಲ್ಯಾಂಟರ್ನ್ ನ ಸರ್ಕ್ಯೂಟ್ರಿಯಲ್ಲಿನ ಯಾವ ಬದಲಾವಣೆಯು ಹೆಚ್ಚಿದ ಹೊಳಪನ್ನು (brightness) ನೇರವಾಗಿ ವಿವರಿಸುತ್ತದೆ?

Ans
- ✔ 1. ಬಲ್ಬ್ ಸರ್ಕ್ಯೂಟ್‌ನಲ್ಲಿ ರೋಧವು ಕಡಿಮೆಯಾಗಿ, ವಿದ್ಯುತ್ ಪ್ರವಾಹ ಹೆಚ್ಚಾಗುತ್ತದೆ
- ✘ 2. ಬಲ್ಬ್ ಮೂಲಕ ಹರಿಯುವ ವಿದ್ಯುತ್ ಪ್ರವಾಹವು ಕಡಿಮೆಯಾಗುತ್ತದೆ, ರೋಧವು ಬದಲಾಗುವುದಿಲ್ಲ
- ✘ 3. ಬ್ಯಾಟರಿಯಿಂದ ಪೂರೈಕೆಯಾಗುವ ವೋಲ್ಟೇಜ್ ಹೆಚ್ಚಾಗುತ್ತದೆ, ರೋಧವು ಸ್ಥಿರವಾಗಿರುತ್ತದೆ
- ✘ 4. ಬಲ್ಬ್ ಸರ್ಕ್ಯೂಟ್‌ನಲ್ಲಿ ರೋಧವು ಹೆಚ್ಚಾಗಿ, ವಿದ್ಯುತ್ ಪ್ರವಾಹ ಕಡಿಮೆಯಾಗುತ್ತದೆ

blackbook

Q.42 ಸಂಖ್ಯೆ 23 ಎಂಬುದು ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ ಸಂಖ್ಯೆ 276 ಕ್ಕೆ ಸಂಬಂಧಿಸಿದೆ. ಅದೇ ತರ್ಕದಂತೆ ಸಂಖ್ಯೆ 20, ಸಂಖ್ಯೆ 240 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿದರೆ ಸಂಖ್ಯೆ 28 ಈ ಕೆಳಗಿನ ಯಾವ ಆಯ್ಕೆಗೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಿರ್ವಹಿಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಲು ಅವಕಾಶವಿಲ್ಲ.)

Ans
- ✗ 1. 372
- ✗ 2. 348
- ✗ 3. 356
- ✓ 4. 336

Q.43 ಒಂದುವೇಳೆ '+' ಮತ್ತು '-' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ ಹಾಗೂ 'x' ಮತ್ತು '÷' ಗಳನ್ನು ಪರಸ್ಪರ ಅದಲು ಬದಲು ಮಾಡಿದರೆ, ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಯಾವ ಆಯ್ಕೆಯು ಸರಿಹೊಂದುತ್ತದೆ?

45 ÷ 5 - 290 x 5 + 31 =?

Ans
- ✗ 1. 260
- ✗ 2. 270
- ✓ 3. 252
- ✗ 4. 264

Q.44 ಬಾಹ್ಯ ಆಕ್ರಮಣ ಮತ್ತು ಆಂತರಿಕ ಗಲಭೆಯಿಂದ 'ರಾಜ್ಯಗಳನ್ನು ರಕ್ಷಿಸುವ ಒಕ್ಕೂಟದ ಕರ್ತವ್ಯ'ವನ್ನು ಯಾವ ಅನುಚ್ಛೇದದಲ್ಲಿ ಹೇಳಲಾಗಿದೆ?

Ans
- ✗ 1. ಅನುಚ್ಛೇದ 360
- ✗ 2. ಅನುಚ್ಛೇದ 354
- ✗ 3. ಅನುಚ್ಛೇದ 365
- ✓ 4. ಅನುಚ್ಛೇದ 355

Q.45 ಪುರುಷ ಸಂತಾನೋತ್ಪತ್ತಿ ವ್ಯವಸ್ಥೆಯಲ್ಲಿ ಗ್ರಂಥಿಗಳ ಪಾತ್ರದ ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ?

Ans
- ✗ 1. ಅವು ವೀರ್ಯ ಉತ್ಪಾದನೆಗೆ ಕಾರಣವಾಗಿವೆ.
- ✓ 2. ಅವು ವೀರ್ಯವನ್ನು ಪೋಷಿಸುವ ದ್ರವಗಳನ್ನು ಸೇರಿಸುತ್ತವೆ.
- ✗ 3. ಅವು ವೃಷಣಗಳ ಉಷ್ಣತೆಯನ್ನು ನಿಯಂತ್ರಿಸುತ್ತವೆ.
- ✗ 4. ಅವು ವೀರ್ಯದ ಆನುವಂಶಿಕ ವಸ್ತುಗಳನ್ನು ಸಂಗ್ರಹಣೆ ಮಾಡುತ್ತವೆ.

Q.46 ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ,
'A @B' ಎಂದರೆ 'A ಅವರು B ಅವರ ಸಹೋದರ',
'A ^ B 'ಎಂದರೆ 'A ಅವರು B ಅವರ ತಂದೆ',
'A ≠ B'ಎಂದರೆ 'A ಅವರು B ಅವರ ಮಗ' ಮತ್ತು
'A ≥ B' ಎಂದರೆ 'A ಅವರು B ಅವರ ಹೆಂಡತಿ'.
ಮೇಲಿನದನ್ನು ಆಧರಿಸಿ, ಒಂದು ವೇಳೆ 'P ≥ Q ≠ V ^ W @ X' ಆಗಿದ್ದರೆ, P ಅವರು X ಗೆ ಹೇಗೆ ಸಂಬಂಧಿ?

Ans
- ✗ 1. ಸಹೋದರಿ
- ✓ 2. ಸಹೋದರನ ಹೆಂಡತಿ
- ✗ 3. ಸಹೋದರಿಯ ಮಗಳು
- ✗ 4. ಮಗಳು

Q.47 ₹9100 ಅನ್ನು ಮೂರು ಭಾಗಗಳಾಗಿ ವಿಂಗಡಿಸಬೇಕಿದ್ದು, ಮೊದಲ ಭಾಗದ ಅರ್ಧದಷ್ಟು, ಎರಡನೇ ಭಾಗದ ನಾಲ್ಕನೇ ಒಂದರಷ್ಟು ಮತ್ತು ಮೂರನೇ ಭಾಗದ ಎಂಟನೇ ಒಂದರಷ್ಟು ಸಮಾನವಾಗಿರಬೇಕು. ಹಾಗಾದರೆ, ಮೊದಲ ಭಾಗವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
- ✓ 1. 1300
- ✗ 2. 1400
- ✗ 3. 1600
- ✗ 4. 1200

blackbook

Q.48 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಿ.

ಪ್ರಶ್ನೆ:
ವಿಹಾನ್, ವಾಮಿಕಾ, ಕ್ಯಾಂಡರ್, ಯಾಶಿಕಾ ಮತ್ತು ಜೊರಾವರ್ ಎಂಬ ಐವರು ಒಂದು ಓಟದ ಸ್ಪರ್ಧೆಯನ್ನು ಮುಗಿಸಿದರು. ಕೊನೆಯವರಾಗಿ ಓಟ ಮುಗಿಸಿದವರು ಯಾರು?

ಹೇಳಿಕೆಗಳು:
(I) ಕ್ಯಾಂಡರ್ ಮತ್ತು ಜೊರಾವರ್ ಅವರ ನಡುವೆ ನಿಖರವಾಗಿ ಇಬ್ಬರು ಓಟಗಾರರು ಮುಗಿಸಿದರು.
(II) ವಾಮಿಕಾ ಅವರು ವಿಹಾನ್ ಅವರಿಗಿಂತ ಮೊದಲು ಮುಗಿಸಿದರು ಮತ್ತು ಯಾಶಿಕಾ ಅವರು ಕ್ಯಾಂಡರ್ ಅವರಿಗಿಂತ ಮೊದಲು ಮುಗಿಸಿದರು.

Ans
✗ 1. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

✓ 2. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು ಹೇಳಿಕೆ II ರ ಒಟ್ಟು ಮಾಹಿತಿ ಎರಡೂ ಸಾಕಾಗುವುದಿಲ್ಲ

✗ 3. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು II ಎರಡರ ಒಟ್ಟು ಮಾಹಿತಿಯು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತವೆ

✗ 4. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

Q.49 ಒಂದು ನಿರ್ದಿಷ್ಟ ದೂರದ ಐದನೇ-ಒಂದು ಭಾಗವನ್ನು 85 km/h ವೇಗದಲ್ಲಿ ಕ್ರಮಿಸಲಾಯಿತು, ಮೂರನೇ-ಒಂದು ಭಾಗವನ್ನು 60 km/h ವೇಗದಲ್ಲಿ ಕ್ರಮಿಸಲಾಯಿತು ಮತ್ತು ಉಳಿದ ದೂರವನ್ನು 80 km/h ವೇಗದಲ್ಲಿ ಕ್ರಮಿಸಲಾಯಿತು. ಹಾಗಾದರೆ ಇಡೀ ಪ್ರಯಾಣದಲ್ಲಿನ ಸರಾಸರಿ ವೇಗ (km/h ಗಳಲ್ಲಿ) ಎಷ್ಟು? (ಎರಡು ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸರಿಹೊಂದಿಸಿ)

Ans
✗ 1. 72.11

✓ 2. 72.77

✗ 3. 70.51

✗ 4. 75.25

Q.50 CYCLOTOMIES ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಗುಂಪಿನಲ್ಲಿ ಎಷ್ಟು ಅಕ್ಷರ(ಗಳು) ಎರಡಕ್ಕಿಂತ ಹೆಚ್ಚು ಬಾರಿ ಕಾಣಿಸಿಕೊಳ್ಳುತ್ತದೆ(ವೆ)?

Ans
✓ 1. ಎರಡು

✗ 2. ನಾಲ್ಕು

✗ 3. ಒಂದು

✗ 4. ಮೂರು

Q.51 **ಈ ಪ್ರಶ್ನೆಯಲ್ಲಿ, ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳನ್ನು ಅನುಸರಿಸುವ ಷರತ್ತುಗಳ ಪ್ರಕಾರ, ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಅಕ್ಷರ ಸಂಕೇತಗಳಿಂದ ಸಂಕೇತಿಸಲಾಗಿದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯು ನಿಮ್ಮ ಉತ್ತರವಾಗಿದೆ. ಒಂದು ವೇಳೆ ಯಾವುದೇ ಷರತ್ತುಗಳು ಅನ್ವಯವಾಗದಿದ್ದರೆ, ಆಗ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನು ಕೋಷ್ಟಕದಲ್ಲಿ ನೀಡಿರುವಂತೆಯೇ ನೇರವಾಗಿ ಅನುಸರಿಸಬೇಕು.**

ಸಂಖ್ಯೆ /ಚಿಹ್ನೆ * @ 6 3 9 1 2 ? 7 8

ಸಂಕೇತ BH ZXCUDLRA

ಷರತ್ತುಗಳು –
(i) ಮೊದಲ ಘಟಕಾಂಶವು ಚಿಹ್ನೆಯಾಗಿದ್ದರೆ, ಮೊದಲ ಮತ್ತು ಕೊನೆಯ ಘಟಕಾಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಬೇಕು.
(ii) ಎರಡನೇ ಮತ್ತು ಮೂರನೇ ಘಟಕಾಂಶಗಳು ಸಂಖ್ಯೆಗಳಾಗಿದ್ದರೆ, ಮೂರನೇ ಘಟಕಾಂಶವನ್ನು ಎರಡನೇ ಘಟಕಾಂಶದ ಸಂಕೇತವಾಗಿ ಸಂಕೇತಿಸಬೇಕು.
(iii) ನಾಲ್ಕನೇ ಘಟಕಾಂಶವು ಚಿಹ್ನೆಯಾಗಿದ್ದರೆ, ನಾಲ್ಕನೇ ಮತ್ತು ಐದನೇ ಘಟಕಾಂಶಗಳನ್ನು © ಎಂದು ಸಂಕೇತಿಸಬೇಕು.

ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
***@639**

Ans
- ✗ 1. DHZXC
- ✗ 2. BHZLC
- ✓ 3. CHZXB
- ✗ 4. BHUXC

Q.52 **ಗಡಿಯಾಚೆಗಿನ ಹೂಡಿಕೆಗೆ ಸುರಕ್ಷಿತ ಮತ್ತು ಆಧುನಿಕ ಕಾನೂನು ಚೌಕಟ್ಟನ್ನು ರೂಪಿಸಲು 2026 ರ ಜುಲೈನಲ್ಲಿ ಜಾರಿಗೆ ಬಂದ ದ್ವಿಪಕ್ಷೀಯ ಹೂಡಿಕೆ ಒಪ್ಪಂದಕ್ಕೆ ಈ ಕೆಳಗಿನವುಗಳಲ್ಲಿ ಯಾವ ಮಧ್ಯಪ್ರಾಚ್ಯ ದೇಶವು ಭಾರತದೊಂದಿಗೆ ಸಹಿ ಹಾಕಿತು?**

Ans
- ✗ 1. ಯುನೈಟೆಡ್ ಅರಬ್ ಎಮಿರೇಟ್ಸ್
- ✗ 2. ಸೌದಿ ಅರೇಬಿಯಾ
- ✗ 3. ಕತಾರ್
- ✓ 4. ಇಸ್ರೇಲ್

Q.53 **ಕೆಳಗೆ ಕೊಟ್ಟಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?**

41 52 64 77 91 106 ?

Ans
- ✓ 1. 122
- ✗ 2. 125
- ✗ 3. 120
- ✗ 4. 118

Q.54 **ಹಿಡಿ ಇರುವ ಒಂದು ರಾಡ್‌ನ ಮುಕ್ತ ತುದಿಯಲ್ಲಿ ಬಲವನ್ನು ಪ್ರಯೋಗಿಸಲಾಗುತ್ತದೆ, ಅದು ಹಿಡಿಯು ಸುತ್ತ ತಿರುಗುವಂತೆ ಮಾಡುತ್ತದೆ. ಅನ್ವಯಿಸಲಾದ ಬಲದಿಂದ ನಡೆದ ಕೆಲಸದ ಬಗ್ಗೆ ಏನು ಹೇಳಬಹುದು?**

Ans
- ✗ 1. ನಡೆಯುವ ಕೆಲಸವು ರಾಡ್ ನ ದ್ರವ್ಯರಾಶಿಯನ್ನು ಮಾತ್ರ ಅವಲಂಬಿಸಿರುತ್ತದೆ
- ✓ 2. ಬಲವನ್ನು ಅನ್ವಯಿಸಿದ ಭಾಗವು ಸ್ಥಳಾಂತರಗೊಂಡಿದ್ದರಿಂದ ಮಾಡಲಾದ ಕೆಲಸವು ಧನಾತ್ಮಕವಾಗಿರುತ್ತದೆ
- ✗ 3. ರಾಡ್ ತಿರುಗುವುದರಿಂದ ನಡೆದ ಕೆಲಸವು ಋಣಾತ್ಮಕವಾಗಿರುತ್ತದೆ
- ✗ 4. ಹಿಡಿತವು ಸ್ಥಿರವಾಗಿರುವ ಕಾರಣದಿಂದಾಗಿ ನಡೆದ ಕೆಲಸವು ಶೂನ್ಯವಾಗಿರುತ್ತದೆ

Q.55 **ಬಾಹ್ಯವಾಗಿ ಸ್ಪರ್ಶಿಸುವ ಎರಡು ವೃತ್ತಗಳ ವಿಸ್ತೀರ್ಣಗಳ ಮೊತ್ತವು 130π sq.cm ಆಗಿದೆ. ಒಂದು ವೇಳೆ ಅವುಗಳ ಮಧ್ಯಬಿಂದುಗಳ ನಡುವಿನ ಅಂತರವು 14 cm ಆಗಿದ್ದರೆ, ಸಣ್ಣ ವೃತ್ತದ ತ್ರಿಜ್ಯವು ಹೀಗಿರುತ್ತದೆ:**

Ans
- ✗ 1. 5 cm
- ✗ 2. 11 cm
- ✓ 3. 3 cm
- ✗ 4. 9 cm

blackbook

Q.56 ಈ ಕೆಳಗಿನವುಗಳಲ್ಲಿ ಯಾವುದು ಒಡಹುಟ್ಟಿದವರಲ್ಲಿ ಆನುವಂಶಿಕ ವ್ಯತ್ಯಾಸಕ್ಕೆ ಕಾರಣವಾಗುತ್ತದೆ?

Ans

✗ 1. ದೋಷಗಳಿಲ್ಲದೆ DNA ಯ ಪರಿಪೂರ್ಣ ಸ್ವಪ್ರತೀಕರಣ

✗ 2. ಮೈಟೋಸಿಸ್ ಮೂಲಕ ಜೀವಕೋಶಗಳ ಒಂದೇ ರೀತಿಯ ವಿಭಜನೆ

✗ 3. ಬಾಹ್ಯ ಪರಿಸರ ಅಂಶಗಳಿಂದ ನೇರವಾಗಿ ಉಂಟಾಗುವ ಬದಲಾವಣೆಗಳು

✓ 4. ಅರೆವಿದಳನದ ಸಮಯದಲ್ಲಿ ವರ್ಣತಂತುಗಳ ಯಾದೃಚ್ಛಿಕ ವಿಂಗಡಣೆ

Q.57 ಮೌಲ್ಯಮಾಪನ ಮಾಡಿ: $\left(\frac{18}{8} \div \frac{18}{9}\right) \div \left(\frac{2}{10} \times \frac{20}{6} + \frac{2}{6}\right) + \frac{9}{11} \div \frac{18}{14} \text{of} \frac{14}{11}$

Ans

✗ 1. 2

✗ 2. 9

✗ 3. 4

✓ 4. 1

Q.58 ಈ ಕೆಳಗಿನ ಅಕ್ಷರ, ಚಿಹ್ನೆಯ ಸರಣಿಯನ್ನು ಪರಿಶೀಲಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) L C * F A J / ^ Z O B O T M Q ? @ F C % T (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆ ಚಿಹ್ನೆಯನ್ನು ಮತ್ತು ತನ್ನ ತಕ್ಷಣದ ಮುಂದೆ ಅಕ್ಷರವನ್ನು ಹೊಂದಿರುವಂತಹ ಎಷ್ಟು ಚಿಹ್ನೆಗಳು ಇಲ್ಲಿವೆ?

Ans

✗ 1. ನಾಲ್ಕು

✗ 2. ಒಂದು

✓ 3. ಎರಡು

✗ 4. ಮೂರು

Q.59 ಯಾವ ಕ್ರಿಯೆಯು ಆಮ್ಲಜನಕದೊಂದಿಗೆ ಅಲೋಹದ ಸಂಯೋಜನೆಯನ್ನು ಪ್ರತಿನಿಧಿಸುತ್ತದೆ?

Ans

✓ 1. $C + O_2 \rightarrow CO_2$

✗ 2. $CaCO_3 \rightarrow CaO + CO_2$

✗ 3. $2Na + Cl_2 \rightarrow 2NaCl$

✗ 4. $CH_4 + 2O_2 \rightarrow CO_2 + 2H_2O$

Q.60 ಭಾರತದ ವಿಸ್ತಾರವಾದ ಉತ್ತರದ ಮೈದಾನಗಳು ಪ್ರಮುಖವಾಗಿ ಈ ಕೆಳಗಿನ ಯಾವ ನದಿವ್ಯೂಹದ ದೀರ್ಘಕಾಲೀನ ಸಂಚಯನ ಚಟುವಟಿಕೆಗಳಿಂದ ರೂಪುಗೊಂಡವು?

Ans

✓ 1. ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರ ನದಿವ್ಯೂಹ

✗ 2. ನರ್ಮದಾ, ತಪತಿ ಮತ್ತು ಮಹಾನದಿ ನದಿವ್ಯೂಹ

✗ 3. ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿವ್ಯೂಹ

✗ 4. ಸಬರಮತಿ, ಲೂನಿ ಮತ್ತು ಮಾಹಿ ನದಿವ್ಯೂಹ

Q.61 ಒಂದೇ ದ್ರವ್ಯರಾಶಿ ಸಂಖ್ಯೆಯನ್ನು ಹೊಂದಿರುವ, ಆದರೆ ಬೇರೆ ಬೇರೆ ಪರಮಾಣು ಸಂಖ್ಯೆಗಳನ್ನು ಹೊಂದಿರುವ ವಿವಿಧ ಧಾತುಗಳ ಪರಮಾಣುಗಳನ್ನು _____ ಎಂದು ಕರೆಯಲಾಗುತ್ತದೆ.

Ans

✓ 1. ಸಮಭಾರಿಗಳು (isobars)

✗ 2. ಸಮಕರ್ಷಕಗಳು (isotones)

✗ 3. ಸಮಾಂಗಿಗಳು (isomers)

✗ 4. ಸಮಸ್ಥಾನಿಗಳು (isotopes)

Q.62 R, S, T, U, G, H, ಮತ್ತು I ಅವರು ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖ ಮಾಡಿ ಕುಳಿತಿದ್ದಾರೆ.
H ಅವರು U ಅವರ ಬಲಕ್ಕೆ ನಾಲ್ಕನೆಯವರಾಗಿ ಕುಳಿತಿದ್ದಾರೆ. I ಅವರ ಎಡದಿಂದ ಎಣಿಸಿದಾಗ I ಮತ್ತು S ನಡುವೆ ಕೇವಲ ಇಬ್ಬರು ಕುಳಿತಿದ್ದಾರೆ. R ಅವರು T ಅವರ ಎಡಕ್ಕೆ ಮೂರನೆಯವರಾಗಿ ಕುಳಿತಿದ್ದಾರೆ. G ಅವರು T ಮತ್ತು S ಅವರ ತಕ್ಷಣದ ನೆರೆಹೊರೆಯವರಾಗಿದ್ದಾರೆ. ಹಾಗಾದರೆ, G ಅವರ ಎಡದಿಂದ ಎಣಿಸಿದಾಗ H ಮತ್ತು G ನಡುವೆ ಎಷ್ಟು ಜನರಿದ್ದಾರೆ?

Ans
✔ 1. ನಾಲ್ವರು
✘ 2. ಇಬ್ಬರು
✘ 3. ಒಬ್ಬರು
✘ 4. ಮೂವರು

Q.63 C, D, E, F, X, Y ಮತ್ತು Z ಎಂಬ ಪ್ರತಿಯೊಬ್ಬರಿಗೂ ಸೋಮವಾರದಿಂದ ಪ್ರಾರಂಭವಾಗಿ ಭಾನುವಾರದಂದು ಕೊನೆಗೊಳ್ಳುವಂತೆ ಒಂದೇ ವಾರದ ಬೇರೆಬೇರೆ ದಿನಗಳಲ್ಲಿ ಪರೀಕ್ಷೆಗಳು ಇವೆ.
Y ಅವರಿಗೆ ಗುರುವಾರ ಪರೀಕ್ಷೆ ಇದೆ ಮತ್ತು F ಅವರಿಗೆ ಶನಿವಾರ ಪರೀಕ್ಷೆ ಇದೆ. C ಅವರಿಗೆ Z ಅವರ ತಕ್ಷಣದ ಹಿಂದಿನ ದಿನ ಪರೀಕ್ಷೆ ಇದೆ. E ಅವರಿಗೆ X ಅವರ ನಂತರದ ಯಾವುದೋ ಒಂದು ದಿನ ಪರೀಕ್ಷೆ ಇದೆ. D ಅವರಿಗೆ Z ಅವರ ತಕ್ಷಣದ ನಂತರದ ದಿನ ಪರೀಕ್ಷೆ ಇದೆ.
ಹಾಗಾದರೆ E ಮತ್ತು D ನಡುವೆ ಎಷ್ಟು ಜನರಿಗೆ ಪರೀಕ್ಷೆ ಇದೆ?

Ans
✔ 1. ಮೂರು
✘ 2. ಒಂದು
✘ 3. ಎರಡು
✘ 4. ನಾಲ್ಕು

Q.64 ಒಂದು ತರಗತಿಯ ವಿದ್ಯಾರ್ಥಿಗಳು ಗಣಿತದಲ್ಲಿ ಪಡೆದ ಸರಾಸರಿ ಅಂಕಗಳು 92 ಆಗಿವೆ. ಹುಡುಗರು ಪಡೆದ ಸರಾಸರಿ ಅಂಕಗಳು ಹುಡುಗಿಯರು ಪಡೆದ ಸರಾಸರಿ ಅಂಕಗಳಿಗಿಂತ 20% ಹೆಚ್ಚು ಇವೆ. ಹುಡುಗರ ಸಂಖ್ಯೆಯ ಹುಡುಗಿಯರ ಸಂಖ್ಯೆಯ ನಡುವಿನ ಅನುಪಾತವು 5 : 2 ಆಗಿದ್ದರೆ, ಹುಡುಗಿಯರು ಪಡೆದ ಸರಾಸರಿ ಅಂಕಗಳು ಎಷ್ಟು?

Ans
✔ 1. 80.5
✘ 2. 80.4
✘ 3. 77
✘ 4. 82

Q.65 ಒಂದು ವೇಳೆ $y - 9 = 3\sqrt{7}$ ಆಗಿದ್ದರೆ, $\sqrt{(y-1)} - \frac{1}{\sqrt{y-1}}$ ನ ಮೌಲ್ಯವನ್ನು ಕಂಡುಹಿಡಿಯಿರಿ.

Ans
✘ 1. 28
✔ 2. $\sqrt{14}$
✘ 3. $2\sqrt{7}$
✘ 4. $7\sqrt{2}$

Q.66 ಭಾರತದ ಗ್ರಾಮ ವ್ಯಾಪ್ತಿಯೊಳಗಿನ ಸಾರ್ವಜನಿಕ ಸ್ಥಳಗಳಿಂದ ಅತಿಕ್ರಮಣಗಳನ್ನು ತೆರವುಗೊಳಿಸುವ ಜವಾಬ್ದಾರಿಯನ್ನು ಈ ಕೆಳಗಿನ ಯಾವ ಪ್ರಾಧಿಕಾರವು ಹೊಂದಿದೆ?

Ans
✘ 1. ಗ್ರಾಮ ನ್ಯಾಯಾಲಯಗಳು
✘ 2. ಪೊಲೀಸ್ ಇಲಾಖೆ
✘ 3. ತಾಲ್ಲೂಕು ಮ್ಯಾಜಿಸ್ಟ್ರೇಟ್
✔ 4. ಗ್ರಾಮ ಪಂಚಾಯತ್

Q.67 PROVEN ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ನಂತರ ಹೀಗೆ ರೂಪುಗೊಂಡ ಅಕ್ಷರ-ಗುಚ್ಛದಲ್ಲಿನ ಎಲ್ಲಾ ಅಕ್ಷರಗಳನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಲಾಗುತ್ತದೆ. ಹೀಗೆ ರೂಪುಗೊಂಡ ಹೊಸ ಅಕ್ಷರ-ಗುಚ್ಛದಲ್ಲಿ ಈ ಕೆಳಗಿನ ಯಾವ ಅಕ್ಷರವು ಬಲದಿಂದ ಎರಡನೆಯ ಸ್ಥಾನದಲ್ಲಿರುತ್ತದೆ?

Ans
✘ 1. P
✘ 2. O
✘ 3. Q
✔ 4. S

blackbook

Q.68 ಒಂದು ವಿದ್ಯುತ್ ಕಂಬದ ನೆರಳಿನ ಉದ್ದವು ಆ ಕಂಬದ ಎತ್ತರಕ್ಕೆ ಸಮನಾದಾಗ ಸೂರ್ಯನ ಉನ್ನತ ಕೋನವನ್ನು ಕಂಡುಹಿಡಿಯಿರಿ.

Ans
✗ 1. 30^{o}
✗ 2. 60^{o}
✓ 3. 45^{o}
✗ 4. 90^{o}

Q.69 ಒಬ್ಬ ವ್ಯಕ್ತಿಯು ನಿಶ್ಚಲ ನೀರಿನಲ್ಲಿ 8 km/h ವೇಗದಲ್ಲಿ ದೋಣಿಯನ್ನು ಚಲಾಯಿಸಬಲ್ಲನು. ಪ್ರವಾಹದ ವೇಗವು 3 km/h ಆಗಿದೆ. ಪ್ರವಾಹದ ದಿಕ್ಕಿಗೆ ವಿರುದ್ಧವಾಗಿ ಒಂದು ನಿರ್ದಿಷ್ಟ ದೂರವನ್ನು ಕ್ರಮಿಸಲು, ಅಷ್ಟೇ ದೂರವನ್ನು ಪ್ರವಾಹದ ದಿಕ್ಕಿನಲ್ಲಿ ಕ್ರಮಿಸಲು ಬೇಕಾಗುವ ಸಮಯಕ್ಕಿಂತ 6 ಗಂಟೆಗಳಷ್ಟು ಹೆಚ್ಚಿನ ಸಮಯ ಬೇಕಾಗುತ್ತದೆ. ಹಾಗಾದರೆ ಪ್ರಯಾಣಿಸಿದ ಏಕಮುಖ ದೂರವನ್ನು ಕಂಡುಹಿಡಿಯಿರಿ.

Ans
✓ 1. 55 km
✗ 2. 50 km
✗ 3. 60 km
✗ 4. 45 km

Q.70 ಗ್ರಾಮೀಣ ಬಡವರಿಗೆ ಉದ್ಯೋಗ ಒದಗಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (NREP) ಮತ್ತು ಗ್ರಾಮೀಣ ಭೂರಹಿತ ಉದ್ಯೋಗ ಖಾತರಿ ಕಾರ್ಯಕ್ರಮವನ್ನು (RLEGP) ವಿಲೀನಗೊಳಿಸುವ ಮೂಲಕ ಭಾರತದಲ್ಲಿ ಜವಾಹರ್ ರೋಜ್ಗಾರ್ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?

Ans
✗ 1. 1969
✓ 2. 1989
✗ 3. 1999
✗ 4. 1979

Q.71 ನೆಲದಲ್ಲಿ ಹೂಳಲಾದ ಉದ್ದವಾದ, ಲಂಬವಾದ ಲೋಹದ ಪೈಪ್ , ಸ್ಥಿರವಾದ ವಿದ್ಯುತ್ ಪ್ರವಾಹವನ್ನು ಮೇಲ್ಮುಖವಾಗಿ ಸಾಗಿಸುತ್ತದೆ. ನೆಲದ ಮೇಲಿರುವ ಒಬ್ಬ ತಂತ್ರಜ್ಞನು ಪೈಪ್‌ಗೆ ಸಮಾನಾಂತರವಾಗಿ 0.8 ಮೀಟರ್ ದೂರದಲ್ಲಿ ಡಿಜಿಟಲ್ ದಿಕ್ಸೂಚಿಯನ್ನು ಹಿಡಿದಿಟ್ಟುಕೊಳ್ಳುತ್ತಾನೆ. ಅನಿರೀಕ್ಷಿತವಾಗಿ, ದಿಕ್ಸೂಚಿ ಸೂಜಿಯು ಉತ್ತರಕ್ಕೆ ಹೊಂದಿಸುವ ಬದಲು ಪೂರ್ವಕ್ಕೆ ತಿರುಗುತ್ತದೆ. ಈ ವೀಕ್ಷಣೆಯನ್ನು ಯಾವ ವಿಶ್ಲೇಷಣೆಯು ಉತ್ತಮವಾಗಿ ವಿವರಿಸುತ್ತದೆ?

Ans
✗ 1. ನೆಲದ ಮೇಲೆ ಈ ರೀತಿ ದಿಕ್ಸೂಚಿ ಪ್ರಭಾವಕ್ಕೆ ಒಳಗಾಗಬೇಕಾದರೆ, ಪ್ರವಾಹವು ಸ್ಥಿರವಾಗಿರದೆ ಪರ್ಯಾಯವಾಗಿರಬೇಕು
✓ 2. ಮೇಲ್ಮುಖ ಪ್ರವಾಹದಿಂದ ಉತ್ಪತ್ತಿಯಾಗುವ ಕಾಂತ ಕ್ಷೇತ್ರವು ಅಡ್ಡಲಾಗಿ ಹರಿಯುತ್ತದೆ, ಇದರಿಂದಾಗಿ ದಿಕ್ಸೂಚಿಯ ಸೂಜಿಯು ಆ ಸ್ಥಳದಲ್ಲಿನ ಪೈಪ್ ನ ಕಾಂತ ಕ್ಷೇತ್ರಕ್ಕೆ ಸ್ಪರ್ಶಕವಾಗಿ ಸಮನಾಗುತ್ತದೆ
✗ 3. ದಿಕ್ಸೂಚಿಯು ಭೂಮಿಯ ಕಾಂತ ಕ್ಷೇತ್ರದಿಂದ ಮಾತ್ರ ಪ್ರಭಾವಿತವಾಗಿರುತ್ತದೆ, ಆದ್ದರಿಂದ ಪೈಪ್‌ನಲ್ಲಿರುವ ಪ್ರವಾಹವು ಗಮನಿಸಿದ ವಿಚಲನವನ್ನು ವಿವರಿಸಲು ಸಾಧ್ಯವಿಲ್ಲ.
✗ 4. ಕಾಂತ ಕ್ಷೇತ್ರಗಳು ಪ್ರವಾಹವನ್ನು ಹೊತ್ತೊಯ್ಯುವ ತಂತಿಗಳಿಂದ ನೇರವಾಗಿ ಹೊರಹೊಮ್ಮುವುದರಿಂದ, ದಿಕ್ಸೂಚಿ ಸೂಜಿಯು ಪೈಪ್‌ನಿಂದ ನೇರವಾಗಿ ಹೊರಮುಖವಾಗಿರಬೇಕು

Q.72 ಅನೇಕ ತಿಂಗಳುಗಳ ಬಳಕೆಯ ನಂತರ ಬೆಳ್ಳಿಯ ಚಮಚವು ಕಪ್ಪು ಬಣ್ಣಕ್ಕೆ ತಿರುಗಿದರೆ, ಬಹುಶಃ ಯಾವ ರಾಸಾಯನಿಕ ಕ್ರಿಯೆಯು ಉಂಟಾಗಿದೆ?

Ans
✗ 1. ಬೆಳ್ಳಿಯು ಆಮ್ಲಜನಕದೊಂದಿಗೆ ವರ್ತಿಸಿ ಬೆಳ್ಳಿಯ ಆಕ್ಸೈಡ್ ರೂಪುಗೊಂಡಿದೆ
✓ 2. ಗಾಳಿಯ ಉಪಸ್ಥಿತಿಯಲ್ಲಿ ಬೆಳ್ಳಿಯು ಗಂಧಕದೊಂದಿಗೆ ವರ್ತಿಸಿ ಬೆಳ್ಳಿಯ ಸಲ್ಫೈಡ್ ರೂಪುಗೊಂಡಿದೆ
✗ 3. ಬೆಳ್ಳಿಯು ಇಂಗಾಲದ ಡೈಆಕ್ಸೈಡ್ ಜೊತೆಗೆ ವರ್ತಿಸಿ ಬೆಳ್ಳಿಯ ಕಾರ್ಬೊನೇಟ್ ರೂಪುಗೊಂಡಿದೆ
✗ 4. ಬೆಳ್ಳಿಯು ತೇವಾಂಶದೊಂದಿಗೆ ವರ್ತಿಸಿ ಬೆಳ್ಳಿಯ ಹೈಡ್ರಾಕ್ಸೈಡ್ ರೂಪುಗೊಂಡಿದೆ

Q.73 ₹10,000 ಮೊತ್ತವನ್ನು, ಅರ್ಧ-ವಾರ್ಷಿಕವಾಗಿ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವಂತೆ, ವಾರ್ಷಿಕ 8% ಚಕ್ರ ಬಡ್ಡಿಯ ದರದಲ್ಲಿ 6 ತಿಂಗಳುಗಳ ಅವಧಿಗೆ ಸಾಲವಾಗಿ ನೀಡಲಾಗಿದೆ. ಹಾಗಾದರೆ 6 ತಿಂಗಳುಗಳ ಕೊನೆಯಲ್ಲಿ ಗಳಿಸಿದ ಚಕ್ರ ಬಡ್ಡಿ ಮತ್ತು ಸರಳ ಬಡ್ಡಿಗಳ ನಡುವಿನ ವ್ಯತ್ಯಾಸ ಎಷ್ಟು?

Ans
✗ 1. ₹2
✗ 2. ₹4
✗ 3. ₹20
✓ 4. ₹0

Black book

Q.74 **ಗೋಳೀಯ ಮಸೂರಗಳಿಗೆ ಸಂಬಂಧಿಸಿದ ಕಾರ್ಟೇಶಿಯನ್ ರೂಢಿಗತ ಸಂಕೇತ (ಸೈನ್ ಕನ್ವೆನ್ಷನ್) ಗಳ ಪ್ರಕಾರ, ಮಸೂರದ ಮುಂದೆ ಇರಿಸಲಾದ ನೈಜ ವಸ್ತುವಿಗೆ ವಸ್ತುದೂರದ ಸಂಕೇತ ಏನು?**

Ans

✗ 1. ವಸ್ತು ದೂರವು ಧನಾತ್ಮಕವಾಗಿರುತ್ತದೆ

✗ 2. ವಸ್ತು ದೂರವು ಶೂನ್ಯವಾಗಿರುತ್ತದೆ

✓ 3. ವಸ್ತು ದೂರವು ಋಣಾತ್ಮಕವಾಗಿರುತ್ತದೆ

✗ 4. ವಸ್ತು ದೂರವು ಮಸೂರದ ವಿಧವನ್ನು ಅವಲಂಬಿಸಿರುತ್ತದೆ

Q.75 **ಭೂಮಿಯ ಮೇಲೆ ನಿರಂತರ ಮಾರುತಗಳ ಮಾದರಿಗಳು ಉಂಟಾಗಲು ಮುಖ್ಯ ಕಾರಣವೇನು?**

Ans

✗ 1. ಪರ್ವತ ಶ್ರೇಣಿಗಳ ಭೂಸ್ವರೂಪ

✗ 2. ಸೂರ್ಯ ಮತ್ತು ಚಂದ್ರನ ಗುರುತ್ವದ ಸೆಳೆತ

✗ 3. ದೊಡ್ಡದಾದ ಸಾಗರ ಕಾಯಗಳ ಉಪಸ್ಥಿತಿ

✓ 4. ವಿವಿಧ ಅಕ್ಷಾಂಶಗಳಲ್ಲಿ ಅಸಮಾನ ಸೌರ ತಾಪನ

Q.76 **ಯಾವ ಹೇಳಿಕೆಯು ಒಂದು ಸಂಯುಕ್ತದ ಅಣು ದ್ರವ್ಯರಾಶಿಯ ಲೆಕ್ಕಾಚಾರವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?**

Ans

✗ 1. ಅಣುವಿನಲ್ಲಿರುವ ವಿಶಿಷ್ಟ ಪರಮಾಣು ದ್ರವ್ಯರಾಶಿಗಳನ್ನು ಮಾತ್ರ ಎಣಿಸುವ ಮೂಲಕ ಅದನ್ನು ಕಂಡುಹಿಡಿಯಬಹುದು

✗ 2. ಅಣುವಿನಲ್ಲಿನ ಪರಮಾಣುಗಳ ಪೈಕಿ ಅತಿಹೆಚ್ಚು ಪರಮಾಣು ದ್ರವ್ಯರಾಶಿಯನ್ನು ಬಳಸುವ ಮೂಲಕ ಅದನ್ನು ಕಂಡುಹಿಡಿಯಬಹುದು

✗ 3. ಅಣುವಿನಲ್ಲಿನ ಅತ್ಯಂತ ಕಡಿಮೆ ಪರಮಾಣು ದ್ರವ್ಯರಾಶಿಯನ್ನು ಅತಿ ಹೆಚ್ಚು ದ್ರವ್ಯರಾಶಿಯಿಂದ ಕಳೆಯುವ ಮೂಲಕ ಅದನ್ನು ಕಂಡುಹಿಡಿಯಬಹುದು

✓ 4. ಅಣುವಿನಲ್ಲಿರುವ ಎಲ್ಲಾ ಪರಮಾಣುಗಳ ಪರಮಾಣು ದ್ರವ್ಯರಾಶಿಗಳನ್ನು ಸೇರಿಸುವ ಮೂಲಕ ಅದನ್ನು ಕಂಡುಹಿಡಿಯಬಹುದು

Q.77 **ಚೇತನ್ ಅವರು A ಬಿಂದುವಿನಿಂದ ಚಾಲನೆಯನ್ನು ಆರಂಭಿಸಿ ಪಶ್ಚಿಮಕ್ಕೆ 27 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 16 km ಚಲಿಸುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 32 km ಚಲಿಸಿ B ಬಿಂದುವಿನಲ್ಲಿ ನಿಲ್ಲುತ್ತಾರೆ. ಮೋಹನ್ ಅವರು A ಬಿಂದುವಿನಿಂದ ಪೂರ್ವಕ್ಕೆ 56 km ದೂರದಲ್ಲಿರುವ P ಬಿಂದುವಿನಿಂದ ಚಾಲನೆಯನ್ನು ಆರಂಭಿಸಿ ಪಶ್ಚಿಮಕ್ಕೆ 21 km ಚಲಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 16 km ಚಲಿಸುತ್ತಾರೆ. ಅಂತಿಮವಾಗಿ ಬಲಕ್ಕೆ ತಿರುಗಿ 24 km ಚಲಿಸಿ Q ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ Q ಬಿಂದು ಮತ್ತು B ಬಿಂದುವಿನ ನಡುವಿನ ಅತ್ಯಂತ ಕಡಿಮೆ ದೂರ ಎಷ್ಟು? (ಎಲ್ಲಾ ತಿರುವುಗಳು 90-ಡಿಗ್ರಿ ತಿರುವುಗಳು ಮಾತ್ರ.)**

Ans

✗ 1. 8 km

✗ 2. 2 km

✗ 3. 4 km

✓ 4. 6 km

Q.78 **ಬೆಳಕನ್ನು ಸೂಸುವ ವಿದ್ಯುತ್ ಬಲ್ಬ್ ಮತ್ತು ಶಾಖವನ್ನು ಸೂಸುವ ವಿದ್ಯುತ್ ಹೀಟರ್ ಅನ್ನು ಎರಡು ಪ್ರತ್ಯೇಕ ಮುಚ್ಚಿದ ಪೆಟ್ಟಿಗೆಗಳಲ್ಲಿ ಇಡಲಾಗಿದೆ. ಸ್ವಲ್ಪ ಸಮಯದ ನಂತರ, ಎರಡೂ ಪೆಟ್ಟಿಗೆಗಳು ಬೆಚ್ಚಗಾಗುತ್ತವೆ. ಯಾವ ವಿಧದ ಶಕ್ತಿಯು ಅಂತಿಮವಾಗಿ ಎರಡೂ ಪೆಟ್ಟಿಗೆಗಳಿಂದ ಸುತ್ತಮುತ್ತಲಿನ ಪರಿಸರಕ್ಕೆ ವರ್ಗಾವಣೆಯಾಗುತ್ತದೆ?**

Ans

✓ 1. ಉಷ್ಣ (ಶಾಖ) ಶಕ್ತಿ

✗ 2. ಬೆಳಕಿನ ಶಕ್ತಿ

✗ 3. ವಿದ್ಯುತ್ ಶಕ್ತಿ

✗ 4. ರಾಸಾಯನಿಕ ಶಕ್ತಿ

Q.79 **ಹಿಂದೂ ದೇವಾಲಯದ ವಾಸ್ತುಶಿಲ್ಪದ ನಾಗರ ಶೈಲಿಯು ವಕ್ರರೇಖೆಗಳಿಂದ ಕೂಡಿದ ಶಿಖರದ ಮೂಲಕ ಗುರುತಿಸಲ್ಪಟ್ಟಿದೆ, ಇದು ಪ್ರಮುಖವಾಗಿ ಭಾರತದ ಯಾವ ಪ್ರದೇಶಕ್ಕೆ ಸಂಬಂಧಿಸಿದೆ?**

Ans

✗ 1. ಈಶಾನ್ಯ ಭಾರತ

✗ 2. ದಕ್ಷಿಣ ಭಾರತ

✗ 3. ಮಧ್ಯ ದಖ್ಖನ್ ಮಾತ್ರ

✓ 4. ಉತ್ತರ ಭಾರತ

Q.80 1991 ರಲ್ಲಿ ಮಾಡಲಾದ ಭಾರತೀಯ ರೂಪಾಯಿಯ ಅಪಮೌಲ್ಯೀಕರಣವು ಮುಖ್ಯವಾಗಿ ಈ ಕೆಳಗಿನ ಯಾವುದನ್ನು ಗುರಿಯಾಗಿಸಿಕೊಂಡಿತ್ತು?

Ans
1. ಆಮದು ವಸ್ತುಗಳನ್ನು ತುಲನಾತ್ಮಕವಾಗಿ ಅಗ್ಗವಾಗಿಸುವ ಮೂಲಕ ವಿದೇಶಿ ಹೂಡಿಕೆಯನ್ನು ಉತ್ತೇಜಿಸುವುದು
2. ಪಾವತಿ ಶಿಲ್ಕಿನ ಬಿಕ್ಕಟ್ಟನ್ನು ಪರಿಹರಿಸುವುದು ಮತ್ತು ವಿದೇಶಿ ವಿನಿಮಯದ ಒಳಹರಿವನ್ನು ಹೆಚ್ಚಿಸುವುದು
3. ಆರ್ಥಿಕತೆಯಲ್ಲಿ ಹಣದ ಪೂರೈಕೆಯನ್ನು ಕಡಿಮೆ ಮಾಡುವ ಮೂಲಕ ದೇಶದಲ್ಲಿ ಹಣದುಬ್ಬರವನ್ನು ನಿಯಂತ್ರಿಸುವುದು
4. ದೇಶೀಯ ಬ್ಯಾಂಕುಗಳ ದಕ್ಷತೆಯನ್ನು ಹೆಚ್ಚಿಸಲು ಅವುಗಳಿಂದ ಸರ್ಕಾರ ಪಡೆಯುವ ಸಾಲವನ್ನು ಸೀಮಿತಗೊಳಿಸುವುದು


Q.81 P ಮತ್ತು Q ಎಂಬ ಇಬ್ಬರು ಸ್ನೇಹಿತರು ಕ್ರಮವಾಗಿ ₹386 ಮತ್ತು ₹178 ಆರಂಭಿಕ ಬಂಡವಾಳ ಕೊಡುಗೆಗಳೊಂದಿಗೆ ಒಂದು ವ್ಯಾಪಾರವನ್ನು ಪ್ರಾರಂಭಿಸಿದರು. ವರ್ಷಾಂತ್ಯದಲ್ಲಿ ಆ ವ್ಯಾಪಾರವು ₹56,400 ಲಾಭ ಗಳಿಸಿತು. ಹಾಗಾದರೆ ಲಾಭದಲ್ಲಿ P ಯ ಪಾಲನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
1. 38,500
2. 38,600
3. 38,700
4. 38,450

Q.82 ಐದು ಜಲೀಯ ದ್ರಾವಣಗಳು 1, 4, 7, 9 ಮತ್ತು 11 ರಷ್ಟು pH ಮೌಲ್ಯಗಳನ್ನು ಹೊಂದಿವೆ. ಜಲಜನಕ ಅಯಾನುಗಳ (H^+) ಸಾಂದ್ರತೆಯ ಏರಿಕೆ ಕ್ರಮವನ್ನು ಈ ಕೆಳಗಿನ ಯಾವ ಜೋಡಣೆಯು ಸರಿಯಾಗಿ ಪ್ರತಿನಿಧಿಸುತ್ತದೆ?

Ans
1. 4 < 1 < 7 < 9 < 11
2. 7 < 9 < 11 < 4 < 1
3. 11 < 9 < 7 < 4 < 1
4. 1 < 4 < 7 < 9 < 11

Q.83 ನೀಡಲಾದ ಚಿತ್ರದಲ್ಲಿ, PQ ∥ RS ಆಗಿದೆ. ಹಾಗಾದರೆ Y ಯ ಮೌಲ್ಯವನ್ನು ಕಂಡುಹಿಡಿಯಿರಿ.



Ans
1. 63
2. 93
3. 27
4. 117

Q.84 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ:

(ಎಡ) SOB DIG FIN JOG (ಬಲ)

ಬಲದಿಂದ ಎರಡನೇ ಪದದ ಎರಡನೇ ಅಕ್ಷರ ಮತ್ತು ಎಡದಿಂದ ಎರಡನೇ ಪದದ ಮೂರನೇ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
1. 2
2. 1
3. 4
4. 0

blackbook

Q.85 ಭಾರತದ ಮಹಾ ಮರುಭೂಮಿಯು ಅರಾವಳಿ ಶ್ರೇಣಿಯ ಯಾವ ಅಂಚಿನಲ್ಲಿದೆ?

Ans

✗ 1. ದಕ್ಷಿಣದ ಸೀಮೆ

✗ 2. ಪೂರ್ವದ ಸೀಮೆ

✓ 3. ಪಶ್ಚಿಮದ ಸೀಮೆ

✗ 4. ಉತ್ತರದ ಸೀಮೆ

Q.86 ಆಂಗ್ಲ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಅಕ್ಷರವು ಸರಿಹೊಂದುತ್ತದೆ?

LFI KEH JDG ICF ?

Ans

✗ 1. HBF

✓ 2. HBE

✗ 3. HCF

✗ 4. HCE

Q.87 ಒಂದು ವೇಳೆ ಕೆಳಗಿನ ದತ್ತಾಂಶದ ಸರಾಸರಿಯು 50 ಆಗಿದ್ದರೆ X ನ ಮೌಲ್ಯವೆಷ್ಟು?

ವರ್ಗ	30-40	40-50	50-60	60-70	70-80
ಆವೃತ್ತಿ	47	19	21	13	X

Ans

✗ 1. 37

✗ 2. 45

✓ 3. 20

✗ 4. 14

Q.88 ಕೆಳಗಿನ ಸಮೀಕರಣ ವ್ಯವಸ್ಥೆಯನ್ನು ಬಿಡಿಸಿ ಮತ್ತು x, y ಮತ್ತು z ಮೌಲ್ಯಗಳನ್ನು ಕಂಡುಹಿಡಿಯಿರಿ.

x + y + z = 12
x − 3y − z = 18
x − y − z = 10

Ans

✗ 1. x = 10, y = −4, z = 5

✗ 2. x = 11, y = −4, z = 6

✓ 3. x = 11, y = −4, z = 5

✗ 4. x = 11, y = 4, z = 5

Q.89 ಪೆಟ್ರೋಲ್ ಬೆಲೆಯು (ಪ್ರತಿ ಲೀಟರ್ ಗೆ) 75% ದಷ್ಟು ಹೆಚ್ಚಾಗುತ್ತದೆ. ಪೆಟ್ರೋಲ್ ಮೇಲಿನ ಒಟ್ಟು ವೆಚ್ಚವು ಕೇವಲ 61% ದಷ್ಟು ಹೆಚ್ಚಬೇಕಾದರೆ ಅದರ ಬಳಕೆಯನ್ನು ಎಷ್ಟು ಶೇಕಡಾದಷ್ಟು ಬದಲಾಯಿಸಬೇಕು?

Ans

✗ 1. 8% ದಷ್ಟು ಹೆಚ್ಚಿಸುವುದು

✓ 2. 8% ದಷ್ಟು ಕಡಿಮೆ ಮಾಡುವುದು

✗ 3. 18% ದಷ್ಟು ಹೆಚ್ಚಿಸುವುದು

✗ 4. 18% ದಷ್ಟು ಕಡಿಮೆ ಮಾಡುವುದು

Q.90 ಜನವರಿ 2026 ರಲ್ಲಿ, PARAM ರುದ್ರ ಸೂಪರ್ ಕಂಪ್ಯೂಟರ್ ಅನ್ನು ಐಐಟಿ ಬಾಂಬೆಯಲ್ಲಿ ಉದ್ಘಾಟಿಸಲಾಯಿತು. ಯಾವ ಮಿಷನ್ ಅಡಿಯಲ್ಲಿ ಈ ಸೌಲಭ್ಯ ಕೇಂದ್ರವನ್ನು ಅಭಿವೃದ್ಧಿಪಡಿಸಲಾಯಿತು ಮತ್ತು ನಿಯೋಜಿಸಲಾಯಿತು?

Ans

✓ 1. ನ್ಯಾಷನಲ್ ಸೂಪರ್ ಕಂಪ್ಯೂಟಿಂಗ್ ಮಿಷನ್

✗ 2. ನ್ಯಾಷನಲ್ ಬ್ಲಾಕ್ ಚೈನ್ ಫ್ರೇಮ್ ವರ್ಕ್

✗ 3. ಇಂಡಿಯಾ ಸೆಮಿಕಂಡಕ್ಟರ್ ಮಿಷನ್

✗ 4. ನ್ಯಾಷನಲ್ ಕ್ವಾಂಟಮ್ ಮಿಷನ್

blackbook

Q.91 1828 ರಲ್ಲಿ ರಾಜಾ ರಾಮಮೋಹನ್ ರಾಯ್ ಅವರು ಯಾವ ಸಾಮಾಜಿಕ-ಧಾರ್ಮಿಕ ಸುಧಾರಣಾ ಚಳುವಳಿಯನ್ನು ಸ್ಥಾಪಿಸಿದರು?

Ans

✔ 1. ಏಕದೇವತಾವಾದವನ್ನು ಉತ್ತೇಜಿಸುವ ಬ್ರಹ್ಮ ಸಮಾಜ

✘ 2. ಆಧ್ಯಾತ್ಮಿಕತೆಯನ್ನು ಉತ್ತೇಜಿಸುವ ಥಿಯೋಸಾಫಿಕಲ್ ಸೊಸೈಟಿ

✘ 3. ಭಕ್ತಿಯನ್ನು ಉತ್ತೇಜಿಸುವ ಪ್ರಾರ್ಥನಾ ಸಮಾಜ

✘ 4. ವೈದಿಕ ಸುಧಾರಣೆಗಳನ್ನು ಉತ್ತೇಜಿಸುವ ಆರ್ಯ ಸಮಾಜ

Q.92 ಒಬ್ಬ ತಯಾರಕನು ತನ್ನ ಮಾರಾಟ ಬೆಲೆಯನ್ನು ಉತ್ಪಾದನಾ ವೆಚ್ಚದ ಮೇಲೆ 26% ಹೆಚ್ಚಿಸಿ ನಿಗದಿಪಡಿಸುತ್ತಾನೆ. ಒಂದು ವೇಳೆ ಉತ್ಪಾದನಾ ವೆಚ್ಚವು 26% ರಷ್ಟು ಹೆಚ್ಚಾದರೆ ಮತ್ತು ತಯಾರಕನು ತನ್ನ ಮಾರಾಟ ಬೆಲೆಯನ್ನು 50% ರಷ್ಟು ಹೆಚ್ಚಿಸಿದರೆ, ಆಗುವ ಶೇಕಡಾವಾರು ಲಾಭವನ್ನು ಕಂಡುಹಿಡಿಯಿರಿ.

Ans

✔ 1. 50%

✘ 2. 51%

✘ 3. 53%

✘ 4. 47%

Q.93 ದತ್ತಾಂಶ 6, 10, 14, 18, 22 ರ ವಿಚಲನೆ (variance) σ^2 ಆಗಿದ್ದರೆ, σ^2 ಮೌಲ್ಯ ಎಷ್ಟು?

Ans

✘ 1. 28

✘ 2. 36

✘ 3. 30

✔ 4. 32

Q.94 ಈ ಕೆಳಗಿನ ಗಣಿತೋಕ್ತಿಯನ್ನು ಸರಳೀಕರಿಸಿ.

$$3200 \div 16 \text{ of } \frac{1}{80} + \frac{15}{320} \times 6400 + [850 \div 17] \times 40$$

Ans

✔ 1. 18300

✘ 2. 19300

✘ 3. 17300

✘ 4. 16300

Q.95 ಸೋಡಿಯಂ ಹೈಡ್ರಾಕ್ಸೈಡ್ ಅನ್ನು ಸಾಬೂನುಗಳು ಮತ್ತು ಮಾರ್ಜಕಗಳನ್ನು ತಯಾರಿಸುವ ಕೈಗಾರಿಕೆಗಳಲ್ಲಿ ಏಕೆ ವ್ಯಾಪಕವಾಗಿ ಬಳಸಲಾಗುತ್ತದೆ?

Ans

✘ 1. ಇದು ಸಾಬೂನಿನ ಉತ್ಪನ್ನಗಳ ಗಡಸುತನವನ್ನು ಹೆಚ್ಚಿಸುತ್ತದೆ

✘ 2. ಇದು ತೊಳೆಯುವಾಗ ಬ್ಲೀಚಿಂಗ್ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತದೆ

✔ 3. ಇದು ಕೊಬ್ಬುಗಳೊಂದಿಗೆ ವರ್ತಿಸಿ ಸಾಬೂನು ಮತ್ತು ಗ್ಲಿಸರಾಲ್ ಅನ್ನು ರೂಪಿಸುತ್ತದೆ

✘ 4. ಇದು ಸುತ್ತಲಿನ ಗಾಳಿಯಿಂದ ತೇವಾಂಶವನ್ನು ಹೀರಿಕೊಳ್ಳುತ್ತದೆ

Q.96 ಒಂದು ಡೈನಿಂಗ್ ಟೇಬಲ್ ಸೆಟ್ ನ ನಮೂದಿತ ಬೆಲೆಯು ₹20,000 ಆಗಿದೆ. ಒಂದು ಅಂಗಡಿಯು ಈ ಬೆಲೆಯ ಮೇಲೆ 10% ಮತ್ತು 20% ಗಳ ಸತತ ರಿಯಾಯಿತಿಗಳನ್ನು ನೀಡುತ್ತಿದೆ. ಹಾಗಾದರೆ ಎರಡೂ ರಿಯಾಯಿತಿಗಳನ್ನು ಅನ್ವಯಿಸಿದ ನಂತರ ಗ್ರಾಹಕರು ಪಾವತಿಸುವ ಅಂತಿಮ ಬೆಲೆ ಎಷ್ಟು?

Ans

✘ 1. ₹12,000

✘ 2. ₹16,000

✔ 3. ₹14,400

✘ 4. ₹15,000

Q.97 ಪ್ರಚೋದನೆಗಳಿಗೆ ತಕ್ಷಣದ ಪ್ರತಿಕ್ರಿಯೆ ನೀಡುವುದಕ್ಕಾಗಿ ಸಸ್ಯಗಳು ಯಾವ ವಿಧದ ಅಂಗಾಂಶವನ್ನು ಹೊಂದಿಲ್ಲ?

Ans

✔ 1. ನರ ಅಂಗಾಂಶ

✘ 2. ನಾಳಗಳ ಅಂಗಾಂಶ

✘ 3. ವರ್ಧನ ಅಂಗಾಂಶ

✘ 4. ಹೊರಚರ್ಮದ ಅಂಗಾಂಶ

blackbook

Q.98 ಈ ಕೆಳಗೆ ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಏನು ಬರಬೇಕು?

9 17 30 60 95 147 ?

Ans
✗ 1. 209
✗ 2. 213
✗ 3. 205
✓ 4. 204

Q.99 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 168 ಎಂಬುದು 19 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ 144 ಎಂಬುದು 16 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, 128 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಆಗಿ ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
✗ 1. 16
✗ 2. 19
✗ 3. 21
✓ 4. 14

Q.100 A, B, U, V, Y, ಮತ್ತು Z ಎಂಬವರಲ್ಲಿ ಪ್ರತಿಯೊಬ್ಬರೂ ಬೇರೆ ಬೇರೆ ಅಂಕಗಳನ್ನು ಗಳಿಸಿದ್ದಾರೆ. ಕೇವಲ A ಯು B ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. Z ಮತ್ತು A ನಡುವೆ ಕೇವಲ ಮೂರು ಜನರು ಅಂಕಗಳನ್ನು ಗಳಿಸಿದ್ದಾರೆ. U ಅವರು Y ಗಿಂತ ಕಡಿಮೆ, ಆದರೆ V ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಹಾಗಾದರೆ V ಮತ್ತು B ನಡುವೆ ಎಷ್ಟು ಜನರು ಅಂಕಗಳನ್ನು ಗಳಿಸಿದ್ದಾರೆ?

Ans
✗ 1. ಒಂದು
✗ 2. ಎರಡು
✗ 3. ನಾಲ್ಕು
✓ 4. ಮೂರು

"

Blackk